# ಗದಗ ಬೆಟಗೇರಿ ನಗರ ಸಭೆ ಕಾರ್ಯಾಲಯ

ನಂ: ಗಬೆನಸ/ತಾವಿ/ಎಸ್.ಎಫ್.ಸಿ/2008–09 ದಿನಾಂಕ: 29–12–2008

## ಅಲ್ಪಾವಧಿಯ ಟೆಂಡರ

ಗದಗ ಬೆಟಗೇರಿ ನಗರ ಸಭೆಯ ಅವಳಿ ನಗರದ ಅಭಿವೃದ್ಧಿ ಕಾಮಗಾರಿಗಳ ಕುರಿತು ಸರ್ಕಾರದಿಂದ ಬಿಡುಗಡೆಯಾದ ಎಸ್.ಎಫ್.ಸಿ ಅನುದಾನದ ಶೇ.18 ರ ಅನುದಾನದಲ್ಲಿ ಅವಳಿ ನಗರದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಕಾಲನಿಗಳಲ್ಲಿ ಕಾಂಕ್ರಿಟ ರಸ್ತೆಗಳು 2 ಹಾಗೂ ಡಾಂಬರೀಕರಣ ರಸ್ತೆಗಳಿಗೆ 2 ಒಟ್ಟು 4 ಕಾಮಗಾರಿಗಳ ಶೇಕಡಾವಾರು ಟೆಂಡರಗಳನ್ನು ಕರೆಯಲಾಗಿದ್ದು ಕಾರಣ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ನಗರಸಭೆಯಲ್ಲಿ ನೋಂದಾಯಿಸಿದ್ದ ಅರ್ಹ 3 ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು ಶೇಕಡಾವಾರು ಟೆಂಡರ ದರಗಳನ್ನು ನೀಡಬಹುದು ಟೆಂಡರ ಫಾರ್ಮ ಫೀ 500 ಹಾಗೂ 12.50 ವ್ಯಾಟ್. ನಗರಸಭೆಗೆ ಪಾವತಿಸಿ ಖಾಲಿ ಟೆಂಡರ ಫಾರ್ಮ ತೆಗೆದುಕೊಳ್ಳ ಬಹುದು. ಟೆಂಡರ ವಿವರಣೆ ಹಾಗೂ ಷರತ್ತುಗಳನ್ನು ನಗರಸಭೆಯ ಲೋಕೋಪಯೋಗಿ ಇಲಾಖೆಯ ನೋಟಿಸ ಬೋರ್ಡಿಗೆ ಲಗತ್ತಿಸಿದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ನಗರಸಭೆಯ ಅಂತರಜಾಲದಲ್ಲಿ www.gadag-betagericity.gov.in ನೋಡ ಬಹುದು.

| ಅ. ನಂ | ಕಾಮಗಾರಿಗಳ ವಿವರಣೆ | ಅಂದಾಜು ಮೊತ್ತ | ಮುಂಗಡ ಠೇವಣಿ | ಕಾಮಗಾರಿ ಮಾಡುವ ಕಾಲಾವಕಾಶ | ಗುತ್ತಿಗೆದಾರರ ದರ್ಜೆ |
|---|---|---|---|---|---|
| 1. | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಂಭಾಪೂರ ರಸ್ತೆ 392 ಆಶ್ರಯ ಮನೆಯಗಳ ಕೆಳಗಾಲ ದಲಿತರ ಮನೆಗಳ ಅಶ್ರಯ ಕಾಲನಿಗೆ ಹೋಗುವ ಎ.ಪಿ.ಎಂ.ಸಿ ಹಿಂಭಾಗದ 2 ನೇ ಗೇಟನಿಂದ ಸಂಭಾಪೂರ ರಸ್ತೆಯ ಕ್ರಾಸವರೆಗೆ ಡಾಂಬರೀಕರಣ ಮಾಡುವುದು . | 3.50.000 | 8.750 | 60 ದಿವಸ | 3 ನೇ ದರ್ಜೆ ಮೇಲ್ಪಟ್ಟ |
| 2. | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಾರ್ಡ ನಂ. 30 ರಲ್ಲಿ ಹುಲ್ಲೂರ ಅವರ ಮನೆಯಿಂದ ದತ್ತಾತ್ರೇಯ ರಸ್ತೆ ಕ್ರಾಸವರೆಗೆ ಡಾಂಬರೀಕರಣ ಮಾಡುವುದು | 2.50.000 | 6.250 | 60 ದಿವಸ | 3 ನೇ ದರ್ಜೆ ಮೇಲ್ಪಟ್ಟ |
| 3. | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಾರ್ಡ ನಂ. 16 ರಲ್ಲಿ ಕೆಳಗೇರಿ ಓಣಿಯ ಡಿ.ಸಿ.ಮಿಲ್ ಹತ್ತಿರ ಕಾಂಕ್ರಿಟ ರಸ್ತೆ ಮಾಡುವುದು | 1.50.000 | 3.750 | 60 ದಿವಸ | 3 ನೇ ದರ್ಜೆ ಮೇಲ್ಪಟ್ಟ |
| 4 | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಾರ್ಡ ನಂ. 34 ರಲ್ಲಿ ವಡ್ಡರ ಓಣಿಯಲ್ಲಿ ಕಾಂಕ್ರಿಟ ರಸ್ತೆ ಮಾಡುವುದು | 2.00.000 | 5.000 | 60 ದಿವಸ | 3 ನೇ ದರ್ಜೆ ಮೇಲ್ಪಟ್ಟ |

## ಷರತ್ತುಗಳು

| | |
|---|---|
| 1 | ಕರ್ನಾಟಕ ಸರ್ಕಾರದ ಪಾರದರ್ಶಕ ನಿಯಮ 1999–2000 ನೇದ್ದರ ಪ್ರಕಾರ ಶೇಕಡಾವಾರು ಟೆಂಡರ್ ಹಾಕಬೇಕು. |
| 2 | ಇ.ಎಂ.ಡಿ. ಹಣ ನಗದು ರೂಪದಲ್ಲಿ ತುಂಬಿ ರಶೀದಿ ಪಡೆದುಕೊಳ್ಳತದ್ದು ಅಥವಾ ಪೌರಾಯುಕ್ತರು ಗದಗ ಬೆಟಗೇರಿ ನಗರಸಭೆ ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ ಡಿ.ಡಿ. ತುಂಬಿದ ರಿಶೀದಿಯನ್ನು ಲಗತ್ತಿಸಬೇಕು |
| 3 | ಕಾಮಗಾರಿಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಗುತ್ತಿಗೆದಾರರು ಸ್ವಂತ ಖರ್ಚನಿಂದ ತಂದು ಕೆಲಸ ನಿರ್ವಹಿಸಬೇಕು. |

| | |
|---|---|
| 4 | ಕಾಮಗಾರಿ ಮುಗಿದ ನಂತರ ಎರಡು ವರ್ಷದ ಅವಧಿಯವರೆಗೆ ಗುತ್ತಿಗೆದಾರರು ಕಾಮಗಾರಿಯ ರಿಪೇರಿ ನಿರ್ವಹಣೆ ಮಾಡತಕ್ಕದ್ದು, ಇದಕ್ಕೆ ನಗರಸಭೆಯಿಂದ ಯಾವುದೇ ನಿರ್ವಹಣೆ ಹಣ ಪಾವತಿಸಲಾಗುವುದಿಲ್ಲ |
| 5 | ಗುತ್ತಿಗೆದಾರರು ಸರಿಯಾರಿ ಟೆಂಡರ ದರಗಳನ್ನು ಅಂಕಿ ಹಾಗೂ ಅಕ್ಷರಗಳಲ್ಲಿ ನಮೂದಿಸಬೇಕು. |
| 6 | ಇಚ್ಚೆವುಳ್ಳ ಗುತ್ತಿಗೆದಾರರು ಮೇಲಿನ ಕಾಮಗಾರಿಗಳಿಗೆ ಅರ್ಜಿಯನ್ನು ಸಲ್ಲಿಸಬಹುದು ಅರ್ಜಿಯ ಜೊತೆಗೆ ಟೆಂಡರ ಫಾರ್ಮ ಫೀ ರೂ. 500/– ಹಾಗೂ 12.50 % ವ್ಯಾಟ ನಗದು ರೂಪದಲ್ಲಿ ತುಂಬಿ ಟೆಂಡರ ಫಾರ್ಮ ಪಡೆಯಬೇಕು. |
| 7 | ಕಡಿಮೆ ಸೂಚಿಸಿದ ಟೆಂಡರದಾರರು ಅದರ ಮೊತ್ತವನ್ನು ಡಿ.ಡಿ. ರೂಪದಲ್ಲಿ ಅಥವಾ ನಗರಸಭೆಯ ಖಜಾನೆಯಲ್ಲಿ ನಗದು ಹಣ ತುಂಬಿದ ರಶೀದಿಯನ್ನು ಟೆಂಡರದೊಂದಿಗೆ ಲಗತ್ತಿಸಬೇಕು. |
| 8 | ಇ.ಎಂ.ಡಿ ಲಗತ್ತಿಸದಿದ್ದಲ್ಲಿ ಅಂತಹ ಟೆಂಡರಗಳನ್ನು ತಿರಿಸ್ಕರಿಸಲಾಗುವುದು. ಟೆಂಡರ ಮಂಜೂರಾತಿಯನ್ನು ಯಾವುದೇ ಕಾರಣ ನೀಡದೆ ಮಂಜೂರ ವ, ನಾ ಮಂಜೂರ ಮಾಡುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿ ಕೊಂಡಿದೆ. ಈ ಕುರಿತು ಪತ್ರ ವ್ಯವಹಾರಕ್ಕೆ ಹಾಗೂ ಯಾವುದೇ ವ್ಯಾಜ್ಯಗಳಿಗೆ ಅವಕಾಶ ಇರುವುದಿಲ್ಲಾ. |
| 9 | ಕಾಮಗಾರಿ ಮುಕ್ತಾಯದ ನಂತರ ನಿರ್ವಹಣಾ ಅವಧಿ 2 ವರ್ಷಗಳ ಕಾಲವಿದ್ದು ಗುಣಮಟ್ಟ ಪರಿಶೀಲಿಸಿ ಬದ್ರತಾ ಠೇವಣಿ (ಇ.ಎಂ.ಡಿ ಮತ್ತು ಎಸ್.ಡಿ ಹಣ ) ಹಿಂತಿರುಗಿಸಲಾಗುವದು.. |
| 10. | ಕಾಮಗಾರಿ ಅದೇಶ ನೀಡಿದ ಅವದಿಯೊಳಗಾಗಿ ಕಾಮಗಾರಿ ಪೂರ್ಣಗೊಳಿಸದೇ ಇದ್ದಲ್ಲಿ ಕಾಮಗಾರಿ ಆದೇಶವನ್ನು ಯಾವುದೇ ಕಾರಣ ನೀಡದೆ ರದ್ದುಪಡಿಸಿ ಠೇವಣಿ ಹಣ ನಗರಸಭೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. |
| 11 | ಹೆಚ್ಚಿನ ಮಾಹಿತಿಗಾಗಿ ಬೇಕಾದಲ್ಲಿ ನಗರಸಭೆಯ ಸಹಾಯಕ ಕಾರ್ಯನಿರ್ವಾಹ ಅಭಿಯಂತರರಲ್ಲಿ ಕಛೇರಿ ವೇಳೆಯಲ್ಲಿ ರಜೆ ದಿನಗಳನ್ನು ಹೊರತು ಪಡಿಸಿ ಮಹಿತಿ ಕೇಳಿ ಪಡೆಯ ಬಹುದು. |
| 12 | ಸ್ಥಳಿಯ ಗುತ್ತಿಗೆದಾರರಿಗೆ ಮೊದಲ ಆದ್ಯತೆ ಮತ್ತು ನಗರಸಭೆಯ ಪಂಡಿನಿಂದ 2.00 ಲಕ್ಷ ರೂಪಾಯಗಳವರೆಗಿನ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದ ಬಗ್ಗೆ ದಾಖಲೆ ಲಗ್ಗತ್ತಿಸಬೇಕು. |
| 13 | ಕಾಮಗಾರಿ ಪ್ರಾರಂಭವಾಗುವ ಮುನ್ನವೆ ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಹಾಗೂ ಕಾಮಗಾರಿ ಸಂಪೂರ್ಣಗೊಂಡ ನಂತರ ನಗರಸಭೆಯಿಂದ ನಿಯೋಜಿತಗೊಂಡ 3 ನೇ ಪಾರ್ಟಿ ಅವರಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಪಡೆದ ನಚಿತರ ಬಿಲ್ಲು ಪಾವತಿಸಲಾಗುವದು |
| 14 | ಖುಲ್ಲಾ ಟೆಂಡರ ಫಾರ್ಮ ಪಡೆದುಕೊಂಡು ಗುತ್ತಿಗೆದಾರರು ತಮ್ಮ ಮೊಹರಬಂದ ಮಾಡಿದ ಗುತ್ತಿಗೆ ಪತ್ರಗಳನ್ನು ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಇರಿಸಿದ ಟೆಂಡರ ಪಟ್ಟಿಗೆಯಲ್ಲಿ ಸಾಯಂಕಾಲ 4.00 ಘಂಟೆಯೊಳಗಾಗಿ ಭರ್ತಿ ಮಾಡಿದ ಫಾರ್ಮ ಹಾಕಬೇಕು. ಅದೇ ದಿನ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಟೆಂಡರ ತೆರೆಯಲಾಗುವುದು. ಒಂದು ವೇಳೆ ಟೆಂಡರ ತೆರೆಯಲು ಅನಿವಾರ್ಯ ಕಾರಣಗಳಿಂದ ಮುಂದೂಡಿದಲ್ಲಿ ಮುಂದಿನ ದಿನಾಂಕವನ್ನು ಗುತ್ತಿಗೆದಾರರಿಗೆ ತಿಳಿಸಲಾಗುವುದು. |
| 15 | ನಿರ್ಧಾರಿತ ದಿನಾಂಕಗಳ ವಿವರ :–<br>1. ಟೆಂಡರ ಫಾರ್ಮ ಕುರಿತು ಅರ್ಜಿಯನ್ನು ಕೊಡುವುದು ದಿನಾಂಕ: 15–1–2009 ರಿಂದ 21–1–2009<br>2. ಖಾಲಿ ಟೆಂಡರ ಫಾರ್ಮ ಕೊಡುವ ದಿನಾಂಕ: 22–1–2009 ರಿಂದ 27–1–2009 ರ ವರೆಗೆ<br>3. ಟೆಂಡರ ಹಾಕುವ ದಿನಾಂಕ: 29–1–2009 ಮಧ್ಯಾನ್ಹ 4 ಘಂಟೆಯೊಳಗಾಗಿ |

ಅಧ್ಯಕ್ಷರು
ಗದಗ ಬೆಟಗೇರಿ ನಗರಸಭೆ

ಪೌರಾಯುಕ್ತರು
ಗದಗ ಬೆಟಗೇರಿ ನಗರಸಭೆ